# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಕ್ರಿ ಮಿಸ ನಂಃ 94/2020

**ಪಿ.ಡಬ್ಲ್ಯೂ- 1**

| | | |
|---|---|---|
| ಹೆಸರು | ಃ- | ವೆಂಕಮ್ಮ ಅಲಿಯಾಸ್ ಉಮಾ ಕುಚನೂರು |
| ತಂದೆ / ಗಂಡನ ಹೆಸರು | ಃ- | ವಿನೋದರೆಡ್ಡಿ ಕುಚನೂರು |
| ವಯಾ | ಃ- | 25 ವರ್ಷ |
| ಉದ್ಯೋಗ | ಃ- | ಗೃಹಿಣಿ |
| ವಾಸಸ್ಥಳ | ಃ- | ಜಾವೂರು ಗ್ರಾಮ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 20-07-2023 |

***ಮುಖ್ಯ ವಿಚಾರಣೆ ಃ- ಶ್ರೀ ಹೆಚ್ ಎಸ್ ಡಿ ವಕೀಲರಿಂದ ಃ -***

ದಿನಾಂಕ 14-05-2017 ರಂದು ನನ್ನ ವಿವಾಹವು ಎದುರುದಾರರೊಂದಿಗೆ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲೂಕಿನ ಹೊಸುರು ಗ್ರಾಮದ ಎದುರುದಾರರ ಸ್ವಗೃಹದಲ್ಲಿ ಹಿಂದು ಸಂಪರ್ದಾಯಾದಂತೆ ಆಗಿರುತ್ತದೆ. ನಮ್ಮ ವಿವಾಹ ಸಮಯದಲ್ಲಿ ಎದುರುದಾರರಿಗೆ ನನ್ನ ತವರೂ ಮನೆಯವರು 05 ತೊಲೆ ಬಂಗಾರ ಮತ್ತು 25 ಸಾವಿರ ರೂಪಾಯಿ ಬೆಲೆ ಬಾಳುವ ಬಾಂಡೆ ಸಾಮಾನು ಕೊಟ್ಟಿರುತ್ತಾರೆ.

ವಿವಾಹದ ನಂತರ ನಾನು ಎದುರುದಾರರೊಂದಿಗೆ ಅವರ ಸ್ವಗೃಹದಲ್ಲಿ ಒಂದು ವರ್ಷಗಳ ಕಾಲ ವೈವಾಹಿಕ ಜೀವನವನ್ನು ನಡೆಸಿದ್ದು ಆ ಸಮಯದಲ್ಲಿ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿರುತ್ತಾರೆ. ಆನಂತರ ಎದುರುದಾರರು ನನ್ನನ್ನು ಹೊಡೆಯುವುದು ಬಡೆಯುವುದು ಮಾಡುತ್ತಿದ್ದರು ಅದಕ್ಕೆ ಎದುರುದಾರರ ತಂದೆ ಮತ್ತು ತಾಯಿ ಪ್ರಚೋದನೆ ಕೊಡುತ್ತಿದ್ದರು. ನಾನು ಎದುರುದಾರರು ನನಗೆ ಹೊಡೆಯಲು ಕಾರಣ ಕೇಳಿದಾಗ ಅವರಿಗೆ ಇನ್ನೂ ಹೆಚ್ಚಿನ ಹಣವನ್ನು ನೀಡಿರುವುದಿಲ್ಲ ಎನ್ನುವ ಉದ್ದೇಶಕ್ಕಾಗಿ ಹೊಡೆಯುತ್ತಿದ್ದ ಬಗ್ಗೆ ಎದುರುದಾರರು ನನಗೆ ತಿಳಿಸಿರುತ್ತಾರೆ. ಅಲ್ಲದೇ ನನಗಿಂತಲೂ ಹೆಚ್ಚಿನ ಹಣವನ್ನು ಕೊಡುವವರು ಎದುರುದಾರರೊಂದಿಗೆ

ವಿವಾಹವಾಗಲು ತಯಾರಿದ್ದರು ಎಂದು ನನಗೆ ಹೇಳುತ್ತಿದ್ದರು. ಎದುರುದಾರರು 50 ಸಾವಿರ ರೂಪಾಯಿ ನನ್ನ ತವರೂ ಮನೆಯಿಂದ ತೆಗೆದುಕೊಂಡು ಬರುವಂತೆ ನನಗೆ ಹೇಳುತ್ತಿದ್ದರು. ನನ್ನ ತವರೂ ಮನೆಯವರು ನನ್ನ ವಿವಾಹಕ್ಕಾಗಿ ಸಾಲ ಮಾಡಿದ್ದರಿಂದ ಅವರಿಗೆ ಅಷ್ಟು ಹಣವನ್ನು ಕೊಡಲು ಆಗುವುದಿಲ್ಲ ಎಂದು ನಾನು ಎದುರುದಾರರಿಗೆ ತಿಳಿಸಿರುತ್ತೇನೆ. ನಂತರ ದಿನಬಿಟ್ಟು ದಿನ ಎದುರುದಾರರು ನನಗೆ ಹೆಚ್ಚಿನ ಕಿರುಕುಳ ನೀಡಲು ಪ್ರಾರಂಬಿಸಿ ನನಗೆ ಊಟವನ್ನು ಸಹ ನೀಡಿರುವುದಿಲ್ಲ. ಆ ಕಾರಣದಿಂದಾಗಿ ನನಗೆ ಎದುರುದಾರರ ಮನೆಯಲ್ಲಿ ವಾಸ ಮಾಡುವುದು ಕಷ್ಟವಾಯಿತು. ಆದರೂ ಸಹ ನಾನು ಎದುರುದಾರರ ಮನೆಯಲ್ಲಿ ಇರಲು ಪ್ರಯತ್ನ ಪಟ್ಟಿರುತ್ತೇನೆ. ಆ ಸಮಯದಲ್ಲಿ ನನ್ನ ಬಳಿ ಇದ್ದ 05 ತೊಲೆ ಬಂಗಾರದ ಆಭರಣವನ್ನು ಎದುರುದಾರರು ಕ್ರಮೇಣ ತಮ್ಮ ಬಳಿ ಪಡೆದುಕೊಂಡಿರುತ್ತಾರೆ.

ಆನಂತರ ನನ್ನನ್ನು ಎದುರುದಾರರು 2020 ನೇ 11 ನೇ ತಿಂಗಳಿನಲ್ಲಿ ಅವರ ಮನೆಯಿಂದ ಹೊರಗೆ ಹಾಕಿರುತ್ತಾರೆ. ಆ ಕಾರಣದಿಂದಾಗಿ ಅನಿವಾರ್ಯವಾಗಿ ನಾನು ನನ್ನ ತವರೂ ಮನೆಯಾದ ಜಾವೂರು ಗ್ರಾಮಕ್ಕೆ ಹೋಗಿ ವಾಸ ಮಾಡುತ್ತಿದ್ದೇನೆ. ಆ ಸಮಯದಿಂದ ಇಲ್ಲಿಯವರಿಗೂ ಎದುರುದಾರರು ನನ್ನ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಮತ್ತು ಕಾಳಜಿ ಮಾಡಿರುವುದಿಲ್ಲ. ಅವಾಗಿನಿಂದ ಇಂದಿನವರೆಗೂ ನನಗೆ ಎದುರುದಾರರೊಂದಿಗೆ ಯಾವುದೇ ಸಂಪರ್ಕವಾಗಿಲ್ಲ.

ಎದುರುದಾರರಿಗೆ 20 ಎಕ್ರೆ ಕೃಷಿ ಜಮೀನು ಇದೆ. ಅದರಲ್ಲಿ ಎದುರುದಾರರು ಕಬ್ಬು, ತೆಂಗು, ಬಾಳೆ ಬೆಳೆಯುವುದಲ್ಲದೇ ಅದರಲ್ಲಿ ಮಾವಿನ ತೋಟ ಸಹ ಇದೆ. ಅದರಿಂದ ಎದುರುದಾರರಿಗೆ ವಾರ್ಷಿಕವಾಗಿ 30 ರಿಂದ 35 ಲಕ್ಷ ರೂಪಾಯಿ ಆದಾಯವಿದೆ.

ನನ್ನ ತವರೂ ಮನೆಯವರು ಆರ್ಥಿಕವಾಗಿ ಸ್ದಿತಿವಂತರು ಇರುವುದಿಲ್ಲ. ಎದುರುದಾರರು ನನ್ನನ್ನು ನೋಡಿಕೊಳ್ಳದೇ ಇದ್ದ ಕಾರಣ ನಾನು ಸಾಲ ಮಾಡಿ ಜೀವನ ನಡೆಸುತ್ತಿದ್ದೇನೆ ಅಲ್ಲದೇ ನಾನು ಈ ಪ್ರಕರಣವನ್ನು ಸಹ ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಂಡು ದಾಖಲಿಸಿದ್ದೇನೆ. ಆದ್ದರಿಂದ ನನ್ನ ಅರ್ಜಿಯಲ್ಲಿ ಕೋರಿಕೊಂಡಂತೆ ಎದುರುದಾರರಿಂದ ನನಗೆ ಜೀವನಾಂಶ ಕೊಡಿಸುವಂತೆ ಗೌರವಾನ್ವಿತ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

ನಾನು ಎದುರುದಾರರ ಸ್ವಗೃಹಕ್ಕೆ ಅವರೊಂದಿಗೆ ಜೀವನ ನಡೆಸಲು ಹೋಗಲು ಆಗುವುದಿಲ್ಲ ಏಕೆಂದರೆ ಎದುರುದಾರರು ನಾನು ಅಲ್ಲಿಗೆ ಹೋದರೆ ನನ್ನನ್ನು ಜೀವ ಸಹಿ ಬಿಡುವುದಿಲ್ಲ.

ಎದುರುದಾರರು ನನ್ನ ವಿರುದ್ದ ವಿಜಯಪುರದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದ್ದು ನಾನು ಸದರಿ ಅರ್ಜಿಯ ವಿಚಾರಣೆ ಸಮಯದಲ್ಲಿ 4-5 ಬಾರಿ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಆನಂತರ ನನಗೆ ಸದರಿ ನ್ಯಾಯಾಲಯದ ವಿಚಾರಣೆಗೆ ಹಾಜರಾಗಲು ನಾನು ಒಬ್ಬಳೇ ಇದ್ದ ಕಾರಣ ಆಗಲಿಲ್ಲ. ಅಲ್ಲದೇ ನನಗೆ ಹಣಕಾಸಿನ ಅಡಚಣೆ ಇತ್ತು ಹಾಗೂ ನನ್ನ ತಂದೆ ತಾಯಿ ನನ್ನೊಂದಿಗೆ ಸದರಿ ನ್ಯಾಯಾಲಯಕ್ಕೆ ಬರಲು ಆಗುತ್ತಿರಲಿಲ್ಲ. ಆದ್ದರಿಂದ ನಾನು ಸದರಿ ಪ್ರಕರಣಕ್ಕೆ ಪ್ರತಿ ಮುದ್ದತ್ ಹೋಗಿರುವುದಿಲ್ಲ.

ನಾನು ಈ ಪ್ರಕರಣದಲ್ಲಿ ನನ್ನ ಪರವಾಗಿ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ಸಾಕ್ಷಿ ತಮ್ಮ ವಿವಾಹ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಹೊಸರು ಗ್ರಾಮದ ಜಮೀನು ಸರ್ವೆ ಸಂಖ್ಯೆ 121/2 ಬಿ ಎಕ್ಸ 1, 122/5 ಬಿ, 86/5, 86/2,109/5 ಹಾಗೂ 109/2 ಬಿ ರ ಪಹನಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿ.ಪಿ.2 ರಿಂದ ನಿ.ಪಿ.7 ಎಂದು ಗುರುತಿಸಲಾಯಿತು. ನಿ ಪಿ 2 ರಿಂದ ನಿ ಪಿ 7 ರಂತೆ ಜಮೀನುಗಳು ನನ್ನ ಮಾವ ಅಂದರೆ ಎದುರುದಾರರ ತಂದೆಯ ಹೆಸರಿನಲ್ಲಿದೆ. ನನ್ನ ಮಾವ ಹಾಗೂ ಎದುರುದಾರರು ಕೂಡಿಯೆ ವಾಸ ಮಾಡುತ್ತಾರೆ.

ಎದುರುದಾರರು ಹೊಸುರಿನಲ್ಲಿರುವ ನಂದಿ ಶುಗರ್ ಪ್ಯಾಕ್ಟರಿಯಲ್ಲಿ ಮೆಕ್ಯಾನಿಕ ಎಂದು ಕೆಲಸ ಮಾಡುತ್ತಾರೆ. ಎದುರುದಾರರಿಗೆ ಆ ಕೆಲಸದಿಂದ ಈಗ 04 ವರ್ಷಗಳ ಹಿಂದೆ ಪ್ರತಿ ತಿಂಗಳು 25 ರಿಂದ 30 ಸಾವಿರ ರೂಪಾಯಿ ಸಂಬಳವಿತ್ತು.

ನನಗೆ ಪ್ರತಿ ತಿಂಗಳು ಜೀವನ ನಿರ್ವಹಣೆಗೆ ರೂಪಾಯಿ 10 ಸಾವಿರದ ಅವಶ್ಯಕತೆ ಇದೆ. ಎದುರುದಾರರು ಸಲ್ಲಿಸಿರುವ ತಕರಾರಿನಲ್ಲಿರುವ ಸಂಗತಿಗಳು ಸುಳ್ಳಿನಿಂದ ಕೂಡಿದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸುವಂತೆ ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

PW-1

**ಪಾಟೀಸವಾಲು ಶ್ರೀ ಆರ್ ಎಂ ಆರ್ ವಕೀಲರಿಂದ ಃ-**

ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ.

**(ಸಂತೋಷ ಎಂ. ಎಸ್.)**
ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.
ನವಲಗುಂದ.